# ಕರ್ನಾಟಕ ವಿಧಾನ ಪರಿಷತ್ತು

ವಿಷಯ: ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಡಿ.ಎಸ್. ಅರುಣ್ ರವರು ಕಳೆದ 66 ವರ್ಷಗಳಿಂದ ಮಲೆನಾಡಿನ ಮಹಾಮಾರಿ ಕ್ಯಾಸನೂರು ಫಾರೆಸ್ಟ್ ಡಿಸೀಸ್ (ಕೆಎಫ್‌ಡಿ) ಎಂಬ ಮಂಗನ ಕಾಯಿಲೆಗೆ ಸರಕಾರಗಳು ಗಮನ ಹರಿಸದಿರುವ ಕುರಿತು ಕೋವಿಡ್‌ನಷ್ಟೇ ಕೇಡಿ KFD ಆದರೂ ಸರಕಾರ ತಲೆಕೆಡಿಸಿಕೊಂಡಿಲ್ಲವೇಕೆ? ಆರೋಗ್ಯ ಸಚಿವರೇ, ಲಸಿಕೆ ಎಂದು ಕೊಡುವಿರಿ? ಶೀರ್ಷಿಕೆಯಡಿ ದಿನಾಂಕ 07-12-2023 ರಂದು ವಿಜಯ ಕರ್ನಾಟಕ ಪತ್ರಿಕೆಯಲ್ಲಿ ವರದಿ ಪ್ರಕಟವಾಗಿರುತ್ತದೆ. ಕೋವಿಡ್ ಎಂಬ ಮಹಾಮಾರಿ ದಾಳಿಯಿಟ್ಟ ವರ್ಷವೇ ಲಸಿಕೆ ಸಿದ್ಧಪಡಿಸುವ ಸರಕಾರ, ಚೀನಾ ವೈರಸ್ ಹೊಸ್ತಿಲಲ್ಲಿ ಇದೆ ಎಂದು ಡಬ್ಲ್ಯೂಹೆಚ್ ಓ ಹೇಳಿದ ತಕ್ಷಣ ಎಚ್ಚರಿಕೆ ವಹಿಸುವ ಕೇಂದ್ರ ಮತ್ತು ರಾಜ್ಯ ಸರಕಾರಗಳು ರಾಜ್ಯದ 11 ಜಿಲ್ಲೆ, ದಕ್ಷಿಣ ಭಾರತದ ಐದು ರಾಜ್ಯಗಳಿಗೆ ವ್ಯಾಪಿಸಿರುವ ಕ್ಯಾಸನೂರು ಫಾರೆಸ್ಟ್ ಡಿಸೀಸ್ (ಕೆ.ಎಫ್.ಡಿ) ವಿಚಾರದಲ್ಲಿ ನಿರ್ಲಕ್ಷ್ಯವಹಿಸಿರುವ ಬಗ್ಗೆ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಕಳೆದ ಆರೂವರೆ ದಶಕಗಳಿಂದ ಮಲೆನಾಡನ್ನು ಕಾಡುತ್ತಿರುವ ಕೆ.ಎಫ್.ಡಿ. ಗೆ ಸೂಕ್ತ ಚಿಕಿತ್ಸೆ ಮತ್ತು ಲಸಿಕೆಯೇ ಇಲ್ಲವಾಗಿದೆ. ಮಲೆನಾಡಿನಲ್ಲಿ ಮಂಗನ ಕಾಯಿಲೆಯೇ? ಹಾಗಾದರೆ ಯಾರೂ ಹೊರಗೆ ಬರಬೇಡಿ ಎನ್ನುತ್ತಾರೆ ಅಧಿಕಾರಿಗಳು. ಶಿವಮೊಗ್ಗ, ಉತ್ತರಕನ್ನಡ, ದಕ್ಷಿಣ ಕನ್ನಡ, ಚಿಕ್ಕಮಗಳೂರು, ಉಡುಪಿ, ಬೆಳಗಾವಿ, ಕೇರಳದ ವಯನಾಡ್, ಮಲ್ಲಪ್ಪುರಂ, ಗೋವಾದ ಸತ್ತಾರಿ, ಪೆರ್ನಂ, ವಲ್ಪೋಯಿ, ಧರ್ಬೋಂದರ, ಮಹಾರಷ್ಟ್ರದ ಸಿಂಧುದುರ್ಗ್, ಸಾವಂತವಾಡಿ, ಮೋಡಾಮಾರ್ಗ್, ತಮಿಳುನಾಡಿನ ನೀಲಗಿರಿ ಕಡೆಗಳಲ್ಲಿ ಈ ಮಂಗನಕಾಯಿಲೆಗಳು ಕಂಡುಬಂದಿವೆ. ವರದಿ ಪ್ರಕಾರ ಈ ಕಾಯಿಲೆಯಿಂದ ಈವರೆಗೆ 125ಕ್ಕೂ ಹೆಚ್ಚಿನ ಜನ ಕಳೆದ 1957ನೇ ಇಸವಿಯಿಂದ 2020 ರವರೆಗೆ ಮೃತರಾಗಿದ್ದಾರೆ. ಆದಾಗ್ಯೂ ಸರಕಾರಗಳು ಎಚ್ಚರಿಕೆ ವಹಿಸದಿರುವುದು ಶೋಚನೀಯ ಸಂಗತಿಯಾಗಿದೆ.

ಕಳೆದ ಹತ್ತು ಹಲವು ಅಧಿವೇಶನಗಳಲ್ಲಿ ಈ ವಿಷಯದ ಬಗ್ಗೆ ಸುದೀರ್ಘ ಚರ್ಚೆಯಾಗಿದ್ದರೂ ಯಾವುದೇ ಸೂಕ್ತ ಫಲಿತಾಂಶ ದೊರಕದಿರುವುದರಿಂದ ಸರ್ಕಾರದಲ್ಲಿ ನನ್ನ ಆಗ್ರಹವೇನೆಂದರೆ, ಹೊಸ ಲಸಿಕೆ ಸಿದ್ಧಪಡಿಸುವವರೆಗೆ ಈ ಹಿಂದೆ ನೀಡುತ್ತಿದ್ದ ಲಸಿಕೆಯನ್ನೇ ಮುಂದುವರಿಸಬೇಕು ರದ್ದುಪಡಿಸಿರುವ ಉಪನಿರ್ದೇಶಕರ ಹುದ್ದೆಯನ್ನು ಉನ್ನತೀಕರಿಸಿ ಶಿವಮೊಗ್ಗಕ್ಕೆ ಮಂಜೂರು ಮಾಡಬೇಕು. ಕೆಎಫ್‌ಡಿ ಸೋಂಕಿನ ಬಗ್ಗೆ ಸಂಶೋಧನೆ ಕೈಗೊಳ್ಳಬೇಕು. ಯಾವ್ಯಾವ ಕಾಡುಪ್ರಾಣಿಗಳಿಂದ ಕೆಎಫ್‌ಡಿ ಸೋಂಕು ತಗಲುತ್ತದೆ ಎನ್ನುವ ಬಗ್ಗೆ ಅಧ್ಯಯನ ನಡೆಯಬೇಕು. ದೀರ್ಘಕಾಲ ಕಾರ್ಯ ನಿರ್ವಹಿಸುವ ಲಸಿಕೆಯನ್ನು ಕಂಡುಹಿಡಿಯಬೇಕೆನ್ನುವ ಪತ್ರಿಕಾ ವರದಿಗೆ ನನ್ನಬೆಂಬಲವೂ ಸಹ ಇದ್ದು, ಈ ಕುರಿತಂತೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಪ್ರಸ್ತಾಪಕ್ಕೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಉತ್ತರ:-

1956 ನೇ ಇಸವಿಯಲ್ಲಿ ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕಿನ ಕ್ಯಾಸನೂರು ಕಾಡಿನಲ್ಲಿ ಮಂಗಗಳಲ್ಲಿ ಮೊದಲಿಗೆ ಪತ್ತೆಯಾದ್ದರಿಂದ ಈ ರೋಗಕ್ಕೆ ಕೆ.ಎಫ್.ಡಿ (ಮಂಗನ ಖಾಯಿಲೆ) ಎಂದು ಕರೆಯಲಾಯಿತು. ಮಂಗನ ಖಾಯಿಲೆ ವೈರಸ್ ನಿಂದ ಬರುವ ಖಾಯಿಲೆಯಾಗಿದೆ. ವೈರಸ್ ಸೋಂಕಿತ ಉಣ್ಣೆಗಳು ಕಚ್ಚುವುದರಿಂದ ಮಂಗಗಳು ಹಾಗೂ ಮನುಷ್ಯರಿಗೆ ಈ ಖಾಯಿಲೆಯು ಹರಡುತ್ತದೆ. ಈ ಖಾಯಿಲೆಯು ಮನುಷ್ಯರಿಂದ ಮನುಷ್ಯರಿಗೆ ನೇರವಾಗಿ ಹರಡುವುದಿಲ್ಲ. ಕಾಡಿನಲ್ಲಿ ಸತ್ತ ಮಂಗಗಳು ಕಾಣಿಸುವುದೇ ಈ ಖಾಯಿಲೆಯ ಮುನ್ಸೂಚನೆಯಾಗಿರುತ್ತದೆ.

....2

Scanned with OKEN Scanner

2023ನೇ ಸಾಲಿನಲ್ಲಿ ದಿನಾಂಕ:04.12.2023ರವರೆಗೆ ರಾಜ್ಯದಲ್ಲಿ 16 ಕೆಎಫ್ ಡಿ ಪ್ರಕರಣಗಳು ವರದಿಯಾಗಿವೆ. ವಿವರಗಳು ಈ ಕೆಳಕಂಡಂತಿವೆ.

**KFD status in Karnataka over 5 years**

| Year | 2019 | 2020 | 2021 | 2022 | 2023 (till 04-12-2023) |
|---|---|---|---|---|---|
| No of serum samples tested | 6723 | 6988 | 4467 | 5398 | 7088 |
| No of human positives | 434 | 287 | 23 | 49 | 16 |
| No of human deaths | 15 | 5 | 0 | 2 | 0 |
| N of monkey positives | 305 | 3 | 1 | 0 | 1 |
| No of tick positives | 41 | 19 | 0 | 6 | 0 |

ಮುಂದುವರೆದು, ಕೆ.ಎಫ್.ಡಿ ನಿಯಂತ್ರಣಕ್ಕಾಗಿ ಈ ಕೆಳಕಂಡಂತೆ ಕ್ರಮಗಳನ್ನು ಕೈಗೊಳ್ಳಲಾಗಿದೆ.

- ಮಂಗನ ಖಾಯಿಲೆ ಕಾಣಿಸಿಕೊಂಡ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ಸೂಕ್ತ ಆರೋಗ್ಯ ಶಿಕ್ಷಣದೊಂದಿಗೆ ಈ ಖಾಯಿಲೆಯ ಲಕ್ಷಣಗಳುಳ್ಳ ರೋಗಿಗಳನ್ನು ಕಂಡ ಕೂಡಲೇ ಸ್ಥಳೀಯ ಆರೋಗ್ಯಾಧಿಕಾರಿಗಳಿಗೆ ತಿಳಿಸಲು ಸ್ಥಳೀಯರಲ್ಲಿ ಮನವರಿಕೆ ಮಾಡಿದ್ದು, ಶಂಕಿತ ರೋಗಿಗಳಿಂದ ರಕ್ತದ ಮಾದರಿಗಳನ್ನು ಸಂಗ್ರಹಿಸಿ, ವಿಡಿಎಲ್ ಪ್ರಯೋಗಾಲಯಕ್ಕೆ ಕಳುಹಿಸಲು ಸಂಬಂಧಪಟ್ಟ ಆರೋಗ್ಯಾಧಿಕಾರಿಗಳಿಗೆ ನಿರ್ದೇಶಿಸಲಾಗಿದೆ.

- ಮಂಗಗಳ ಸಾವಿನ 50-ಅಡಿ ಪರಿಧಿಯಲ್ಲಿ ಮೇಲಾಥಿಯಾನ್ ಸಿಂಪಡಿಸಿ ಉಣ್ಣೆಗಳ ನಾಶಕ್ಕೆ ಕ್ರಮ ಕೈಗೊಳ್ಳಲಾಗಿದೆ. ಹಾಗೂ ಪಶು ವೈದ್ಯಾಧಿಕಾರಿಯವರಿಂದ ಸತ್ತ ಮಂಗಗಳ ಮರಣೋತ್ತರ ಪರೀಕ್ಷೆಯ ನಂತರ ಅಂಗಾಂಶ ಸಂಗ್ರಹವನ್ನು ಮಾಡಿ ವಿ.ಡಿ.ಎಲ್ ಪ್ರಯೋಗಾಲಯದಿಂದ ಎನ್.ಐ.ವಿ ಪುಣೆಗೆ ಪರೀಕ್ಷಿಸಲು ಕಳುಹಿಸಲಾಗುತ್ತಿದೆ.

- ಬಾಧಿತ ಪ್ರದೇಶಗಳಲ್ಲಿ ಉಣ್ಣೆಗಳ ಸರ್ವೇಕ್ಷಣೆಯನ್ನು ನಿರಂತರವಾಗಿ ನಡೆಸಲಾಗುತ್ತಿದ್ದು, ವಿ.ಡಿ.ಎಲ್ ಪ್ರಯೋಗಾಲಯದಿಂದ ಎನ್.ಐ.ವಿ ಪುಣೆಗೆ ಪರೀಕ್ಷಿಸಲು ಕಳುಹಿಸಲಾಗುತ್ತಿದೆ.

- ಮಂಗಗಳು ಸಾಯುತ್ತಿರುವ ಕಾಡುಗಳಿಗೆ ಯಾರೂ ಹೋಗದಿರಲು, ಹೋಗಲೇಬೇಕಾದಲ್ಲಿ ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸಿ, ಡಿಇಪಿಎ (DEPA) ತೈಲವನ್ನು ಕೈಕಾಲುಗಳಿಗೆ ಲೇಪಿಸಿ ಹೋಗುವುದು ಹಾಗೂ ಕಾಡಿನಿಂದ ಬಂದ ನಂತರ ಸೋಪು ಬಳಸಿ ಬಿಸಿ ನೀರಿನಿಂದ ಸ್ನಾನ ಮಾಡುವುದು ಮುಂತಾದ ವಿಷಯಗಳ ಬಗ್ಗೆ ಕ್ಷೇತ್ರ ಸಿಬ್ಬಂದಿ/ ಆಶಾ ಕಾರ್ಯಕರ್ತೆಯರು ಮನೆ-ಮನೆಗೆ ಭೇಟಿ ನೀಡಿ ಅರಿವು ಮೂಡಿಸಲಾಗುತ್ತಿದೆ.

- ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ ಸೂಕ್ತ ವೈದ್ಯಕೀಯ ನೆರವಿಗಾಗಿ ಸಾಕಷ್ಟು ಪ್ರಮಾಣದಲ್ಲಿ ಔಷಧಿ ದಾಸ್ತಾನು ಮಾಡಲಾಗಿದೆ. ತಾಲ್ಲೂಕು ಕೇಂದ್ರದ ಆಸ್ಪತ್ರೆಗಳಲ್ಲಿ ಮಂಗನ ಖಾಯಿಲೆಗಾಗಿಯೇ ಪ್ರತ್ಯೇಕ ವಾರ್ಡ್ ಕಾಯ್ದಿರಿಸಲಾಗಿದೆ. ಸಾಗರ ಹಾಗೂ ಹೊನ್ನಾವರ ತಾಲ್ಲೂಕಿನಲ್ಲಿ ಒಂದು ಸಂಚಾರಿ ಆರೋಗ್ಯ ಘಟಕ ಕಾರ್ಯನಿರ್ವಹಿಸುತ್ತಿದೆ. ಹೆಚ್ಚಿನ ವೈದ್ಯಕೀಯ ನೆರವಿನ ಅವಶ್ಯಕವಿದ್ದಡೆ 108 ಆಂಬುಲೆನ್ಸನ್ನು ರೋಗಿಗಳ ಬಳಕೆಗಾಗಿ ಉಪಯೋಗಿಸಲಾಗುತ್ತಿದೆ.

Scanned with OKEN Scanner

- ಮಂಗನ ಖಾಯಿಲೆ ಭಾಧಿತ ಪ್ರದೇಶಗಳ ಜನರಿಗೆ ಆರೋಗ್ಯ ಶಿಕ್ಷಣದ ಬಗ್ಗೆ-ಕರಪತ್ರ, ದೃಶ್ಯ ಮಾಧ್ಯಮ, ಭಿತ್ತಿ ಪತ್ರಗಳು ಹಾಗೂ ಧ್ವನಿವರ್ಧಕಗಳ ಮುಖಾಂತರ ತಿಳುವಳಿಕೆ ನೀಡಲಾಗುತ್ತಿದೆ.
- ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಅಂತರ್ ಇಲಾಖಾ ಸಮನ್ವಯ ಸಮಿತಿ ಸಭೆಯನ್ನು ಸಂಬಂಧಿಸಿದ ಜಿಲ್ಲಾಧಿಕಾರಿ ಹಾಗೂ ತಹಶೀಲ್ದಾರ್ ಇವರ ಅಧ್ಯಕ್ಷತೆಯಲ್ಲಿ ನಡೆಸಲಾಗಿದ್ದು, ರೋಗ ನಿಯಂತ್ರಣಕ್ಕೆ ಎಲ್ಲಾ ಇಲಾಖೆಗಳು ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಲು ಕ್ರಮ ವಹಿಸಲಾಗಿದೆ.
- ಆರೋಗ್ಯ ಶಿಕ್ಷಣ ಮಾಹಿತಿಯೊಡನೆ ಸಾಕಷ್ಟು ಪ್ರಮಾಣದಲ್ಲಿ ಅವಶ್ಯಕವಾದ ಔಷಧಗಳು, ಉಣ್ಣೆ ವಿಕರ್ಷಕ ಡಿಇಪಿಎ (DEPA) ತೈಲವನ್ನು ಬೇಡಿಕೆ ಅನುಸಾರ ವಿತರಿಸಲಾಗುತ್ತಿರುತ್ತದೆ.

ಕೆಎಫ್‌ಡಿ ಖಾಯಿಲೆಗೆ ಯಾವುದೇ ನಿರ್ದಿಷ್ಟವಾದ ಚಿಕಿತ್ಸೆ ಇರುವುದಿಲ್ಲ. ಈ ಖಾಯಿಲೆಯ ನಿಯಂತ್ರಣಕ್ಕಾಗಿ ಎನ್.ಐ.ವಿ ಪುಣೆಯಲ್ಲಿ ಅಭಿವೃದ್ಧಿ ಪಡಿಸಿದ ಕೆಎಫ್‌ಡಿ ಲಸಿಕೆಯನ್ನು 1989 ರಿಂದ ಎಲ್ಲಾ ಕೆಎಫ್‌ಡಿ ಬಾಧಿತ ಪ್ರದೇಶದ ಸಾರ್ವಜನಿಕರಿಗೆ ನೀಡಲಾಗುತ್ತಿತ್ತು. ಈ ಲಸಿಕೆಯನ್ನು 2000 ರಿಂದ ಐ.ಎ.ಹೆಚ್.ವಿ.ಬಿ ಹೆಬ್ಬಾಳ ಬೆಂಗಳೂರು ಇಲ್ಲಿ ತಯಾರಿಸಿ ವಿಡಿಎಲ್ ಶಿವಮೊಗ್ಗ ಇಲ್ಲಿಗೆ ಸರಬರಾಜು ಮಾಡಲಾಗುತ್ತಿತ್ತು.

ಕೆ.ಎಫ್.ಡಿ ಲಸಿಕೆಯ ಬ್ಯಾಚ್ ನಂ-01/22-23 ರ ಗುಣಾತ್ಮಕ ಪರೀಕ್ಷೆ ನಡೆಸಲು ಸಿ.ಡಿ.ಎಸ್.ಸಿ.ಓ ಅವರ ನಿರ್ದೇಶನದಂತೆ ಕಸೌಲಿಯಲ್ಲಿರುವ ಸೆಂಟ್ರಲ್ ಡ್ರಗ್ಸ್ ಲ್ಯಾಬೋರೇಟರಿ ದಿನಾಂಕ: 10-11-2022 (ಪತ್ರ ಸಂಖ್ಯೆ IAH/BPD/KFDV/2022-23) ಕಳುಹಿಸಲಾಗಿತ್ತು. ಪರೀಕ್ಷೆ ನಂತರ ಸಿ.ಡಿ.ಎಲ್ ರವರ ಪತ್ರ ಸಂ-ಸಿಡಿಎಲ್/2023/161 ದಿನಾಂಕ: 06-01-2023ರಂದು ಕೆ.ಎಫ್.ಡಿ ಲಸಿಕೆಯ ಪೊಟೆನ್ಸಿ ಹಾಗೂ ಫಾರ್ಮಲಿನ್ ಪ್ರಮಾಣವು ನಿರ್ದಿಷ್ಟತೆಯ ಅನುಸರಣೆಯಲ್ಲಿ (Not found in compliance with specification w.r.t. formalin content and potency parameter) ಕಂಡುಬಂದಿಲ್ಲವೆಂದು ವರದಿ ನೀಡಲಾಗಿತ್ತು. ಈ ಹಿನ್ನಲೆಯಲ್ಲಿ ಆರೋಗ್ಯ ಇಲಾಖೆಯು ಐ.ಸಿ.ಎಮ್.ಆರ್ ಹಾಗೂ ತಜ್ಞರ ಸಲಹೆ ಮೇರೆಗೆ 16-09-2022 ಮತ್ತು 20-12-2022 ರಂದು ಉನ್ನತ ಮಟ್ಟದ ತಾಂತ್ರಿಕ ಸಮಿತಿಯಲ್ಲಿ ಚರ್ಚಿಸಿ ಸದರಿ ಲಸಿಕೆಯನ್ನು ಉತ್ತಮ ಲಸಿಕೆಯು ಲಭ್ಯವಾಗುವವರೆಗೂ ಸ್ಥಗಿತಗೊಳಿಸಲು ನಿರ್ಧರಿಸಲಾಯಿತು.

<u>ಹೊಸ ಕೆ.ಎಫ್.ಡಿ ಲಸಿಕೆಗಾಗಿ ಸರ್ಕಾರದ ಪ್ರಯತ್ನಗಳು</u>

ದಿನಾಂಕ:24-02-2023ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಆ.ಕು.ಕ ಇಲಾಖೆ ಕರ್ನಾಟಕ ಸರ್ಕಾರ ಹಾಗೂ ಡೈರಕ್ಟರ್ ಜನರಲ್-ಐ.ಸಿ.ಎಮ್.ಆರ್ ಇವರ ಅಧ್ಯಕ್ಷತೆಯಲ್ಲಿ ಕೆಎಫ್ ಡಿ ಲಸಿಕೆಯ ಪೂರೈಕೆ ಬಗ್ಗೆ ಚರ್ಚಿಸಲಾಗಿ, ಐ.ಸಿ.ಎಮ್.ಆರ್ ಇವರು ಹೊಸ ಲಸಿಕೆಯನ್ನು ಅಭಿವೃದ್ಧಿಪಡಿಸಿ ಸಾರ್ವಜನಿಕರ ಉಪಯೋಗಕ್ಕಾಗಿ ಲಭ್ಯವಾಗುವಂತೆ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಲಾಗಿದೆ. ಇದರನ್ವಯ ಸರ್ಕಾರವು ಲಸಿಕೆಯ ಅಭಿವೃದ್ಧಿಯ ವಿಚಾರವಾಗಿ ICMR ಸಂಸ್ಥೆಯೊಂದಿಗೆ ಸತತವಾಗಿ ಸಂಪರ್ಕದಲ್ಲಿದೆ.

ಜಿಲ್ಲಾ ಆಡಳಿತ ಹಾಗೂ ವಿಡಿಎಲ್ ಶಿವಮೊಗ್ಗ ಇವರ ಸತತ ಮೇಲ್ವಿಚಾರಣೆ ಮತ್ತು ಜಿಲ್ಲಾ ಅರೋಗ್ಯಾಧಿಕಾರಿಯವರ ಸತತ ಕಾರ್ಯಾಚರಣೆಯಿಂದ ಮಂಗನ ಖಾಯಿಲೆಯು 2023ನೇ ವರ್ಷದಲ್ಲಿ (04-12-2023ರವರೆಗೆ) ಕೆಎಫ್ ಡಿ ಲಸಿಕೆಯ ಲಭ್ಯವಿಲ್ಲದ ಪರಿಸ್ಥಿತಿಯಲ್ಲೂ ನಿಯಂತ್ರಿಸಲಾಗಿದ್ದು, 16 ಕೆ.ಎಫ್.ಡಿ ಪ್ರಕರಣಗಳು ವರದಿಯಾಗಿದ್ದು, ಆದರೆ ಯಾವುದೇ ಸಾವು ಸಂಭವಿಸಿರುವುದಿಲ್ಲ.

**ಕಡತ ಸಂಖ್ಯೆ: ಆಕುಕ/ಶೂನ್ಯವೇಳೆ/2023**

(ದಿನೇಶ್ ಗುಂಡೂರಾವ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

Scanned with OKEN Scanner